# ಹಿರಿಯ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶೋರಾಪುರ.

## ಅಪರಾಧಿಕ ಪ್ರಕರಣ ಸಂಖ್ಯೆಃ 144/2019

ಫಿರ್ಯಾದಿದಾರರುಃ ಸರ್ಕಾರದ ಪರ ಕೆಂಭಾವಿ ಪೊಲೀಸ್ ಠಾಣೆ.

**:: ವಿರುದ್ಧ ::**

ಆರೋಪಿತರುಃ

1. ನಾನಾಗೌಡ ತಂದೆ ಸಂಗಪ್ಪಗೌಡ ಹೊಸಮನಿ,
   ವಯಸ್ಸುಃ 55 ವರ್ಷ, ಉಃ ಒಕ್ಕಲುತನ,
   ಸಾಃ ಕೂಡಲಗಿ.
2. ಸಂಗಪ್ಪಗೌಡ ತಂದೆ ನಾನಗೌಡ ಹೊಸಮನಿ,
   ವಯಸ್ಸುಃ 25 ವರ್ಷ, ಉಃ ಒಕ್ಕಲುತನ,
   ಸಾಃ ಕೂಡಲಗಿ.
3. ಮಲ್ಲಣಗೌಡ ತಂದೆ ನಾನಗೌಡ ಹೊಸಮನಿ,
   ವಯಸ್ಸುಃ 30 ವರ್ಷ, ಉಃ ಒಕ್ಕಲುತನ,
   ಸಾಃ ಕೂಡಲಗಿ.
   **(ಮೃತ ಪಟ್ಟಿರುತ್ತಾರೆ).**
4. ಮಲ್ಕನಗೌಡ ತಂದೆ ಬಸಪ್ಪ ಕುಂಟಗೊಳ,
   ವಯಸ್ಸುಃ 50 ವರ್ಷ, ಉಃ ಒಕ್ಕಲುತನ,
   ಸಾಃ ಕೂಡಲಗಿ.
5. ಬಸವರಾಜ ತಂದೆ ಮಲಕನಗೌಡ ಕುಂಟಗೊಳ,
   ವಯಸ್ಸುಃ 28 ವರ್ಷ, ಉಃ ಒಕ್ಕಲುತನ,
   ಸಾಃ ಕೂಡಲಗಿ.

**:: ದೋಷಾರೋಪಣೆ ::**

ನಾನು ಶ್ರೀಮತಿ ತಯ್ಯಾಬಾ ಸುಲ್ತಾನಾ, ಹಿರಿಯ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶೋರಾಪೂರ ಆರೋಪಿತರಾದ ನಿಮಗೆ ಈ ಕೆಳಗಿನ ರೀತಿ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ 03.04.2014 ರಂದು ಬೆ.10-00 ಗಂಟೆಯ ಸುಮಾರಿಗೆ ಕೆಂಭಾವಿ ಪೊಲೀಸ ಠಾಣಾ ಹದ್ದಿಯ ಪೈಕಿ ಕೂಡಲಗಿ ಗ್ರಾಮದಲ್ಲಿ ಸಾಕ್ಷಿ ನಂ.4 ನೇದ್ದವರು ಕೂಡಲಗಿ ಗ್ರಾಮದ ಬಸವರಾಜ ಗ್ಯಾರೇಜ ಹತ್ತಿರ ಬರುತ್ತಿದ್ದಾಗ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಭಾ.ದಂ.ಸಂ.ಕಲಂ.143 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಕೇಸಿನ ಆರೋಪಿತರಾವು ನೀವು ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.4 ನೇದ್ದವರು ಬಸವರಾಜ ಗ್ಯಾರೇಜ ಹತ್ತಿರ ಬರುತ್ತಿದ್ದಾಗ ನೀವು ದೊಂಬಿ ಮಾಡುವ ಏಕೊದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಭಾ.ದಂ.ಸಂ.ಕಲಂ.147 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಕೇಸಿನ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.4 ನೇದ್ದವರು ಬಸವರಾಜ ಗ್ಯಾರೇಜ ಹತ್ತಿರ ಬರುತ್ತಿದ್ದಾಗ ನೀವು ದೊಂಬಿ ಮಾಡುವ ಏಕೊದ್ದೇಶದಿಂದ ಕೈಯಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಬಂದು ಭಾ.ದಂ.ಸಂ.ಕಲಂ.148 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಕೇಸಿನ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.4 ನೇದ್ದವರು ಬಸವರಾಜ ಗ್ಯಾರೇಜ ಹತ್ತಿರ ಬರುತ್ತಿದ್ದಾಗ ಹೊಲದಲ್ಲಿ ಇಂಜಿನ ಹಚ್ಚುವ ಸಲುವಾಗಿ ಜಗಳ ತೆಗೆದು ಕೈಯಿಂದ ಮೈಯಲ್ಲಾ ಹೊಡೆದು ಗುಪ್ತಗಾಯ ಮಾಡಿ ಭಾ.ದಂ.ಸಂ.ಕಲಂ.323 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಕೇಸಿನ 1 ನೇ ಆರೋಪಿಯಾದ ನೀನು ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.1 ರವರಿಗೆ ನಮ್ಮ ಹೊಲಕ್ಕೆ ಇಂಜಿನ ಹಚ್ಚಿದರೆ ನೀನು ಹಚ್ಚಬೇಡ ಅಂತಿಯಾ ನಮ್ಮ ಬೆಳೆ ಹಾಳ ಮಾಡಬೇಕು ಅಂತಿಯಾ ಮಗನೆ ಎಂದು ಒಂದು ಕಲ್ಲನ್ನು ತೆಗೆದುಕೊಂಡು ಸಾಕ್ಷಿ ನಂ.4 ನೇದ್ದವರ ಎದೆಗೆ ಹೊಡೆದು ಗುಪ್ತಗಾಯ ಮಾಡಿ ಭಾ.ದಂ.ಸಂ.ಕಲಂ.324 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿ ಎಂದು ನಿನ್ನ ವಿರುದ್ಧ ಆರೋಪಿಸಲಾಗಿದೆ.

ಈ ಕೇಸಿನ ಆರೋಪಿತರಾವು ನೀವು ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.1 ನೇದ್ದವರಿಗೆ ಉದ್ದೇಶಿಸಿ ಏಲೆ ಬೋಸಡಿ ಮಗನೆ ನಮ್ಮ ಹೊಲಕ್ಕೆ ಇಂಜನ ಹಚ್ಚಿದರೆ ನೀನು ಹಚ್ಚಬೇಡ ಅಂತಿಯಾ ನಮ್ಮ ಬೆಳೆ ಹಾಳ ಮಾಡಬೇಕು ಅಂತಿಯಾ ಮಗನೇ ಅಂತಾ ಅವಾಚ್ಯವಾಗಿ ಬೈಯ್ದು ಭಾ.ದಂ.ಸಂ.ಕಲಂ.504 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಕೇಸಿನ ಆರೋಪಿತರಾವು ನೀವು ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ

ಸಾಕ್ಷಿ ನಂ.4 ನೇದ್ದವರೊಂದಿಗೆ ಹೊಲದಲ್ಲಿ ಇಂಜಿನ ಹಚ್ಚುವ ಸಲುವಾಗಿ ಜಗಳ ತೆಗೆದು ಕೈಯಿಂದ ಈ ಮಗನಿಗೆ ಬಿಡಬಾರದು ಜೀವ ಹೊಡೆಯಬೇಕು ಅಂತಾ ಜೀವದ ಬೆದರಿಕೆ ಹಾಕಿ ಭಾ.ದಂ.ಸಂ.ಕಲಂ.506 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಪ್ರ : ನಿಮಗೆ ಮೇಲಿನ ಹೇಳಿಕೆಯನ್ನು ಓದಿ ತಿಳಿಸಿ ಹೇಳಿದ್ದು ನಿಮಗೆ ತಿಳಿಯತೆ?

ಉತ್ತರ : ಆರೋಪಿ ನಂ. 1 ಆರೋಪಿ ನಂ. 2

ಆರೋಪಿ ನಂ. 4 ಆರೋಪಿ ನಂ. 5

ಪ್ರ : ನೀವು ಮೇಲಿನ ಹೇಳಿಕೆಯನ್ನು ಓಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ : ಆರೋಪಿ ನಂ. 1 ಆರೋಪಿ ನಂ. 2

ಆರೋಪಿ ನಂ. 4 ಆರೋಪಿ ನಂ. 5

(ಮೇಲಿನ ಹೇಳಿಕೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರುಗಳನ್ನು ಬರೆಯಲಾಯಿತು ಎಂದು ಧೃಡಿಕರಿಸಿದೆ).

ದಿನಾಂಕ : 29.08.2019

(ತಯ್ಯಬಾ ಸುಲ್ತಾನಾ)
ಹಿರಿಯ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಶೋರಾಪುರ.